ಸಿಟ್ಟಿಗೆ ಆ ಮಹರಾಯ ಏನಾದರೂ ನನ್ನ ಕೊಲೆಗೆ ಯೋಜನೆ ರೂಪಿಸಿರಬಹುದೆ?'

ಹೀಗೆ ಸದಾಶಿವರಿಗೆ ಘಟನೆಗಳ ಸರಮಾಲೆಯನ್ನು ನೆನಪಿಸಿಕೊಂಡು ತಲೆ ಕೆಟ್ಟು ಹೋಗಿತ್ತು!

ಅವರು ತಮ್ಮ ಯೋಚನಾಲಹರಿಯನ್ನು ತಡೆಯಲು ಮತ್ತೇ ಇಯರ್ ಫೋನನ್ನು ಕಿವಿಗೆ ಸಿಕ್ಕಿಸಿ ರೇಡಿಯೊ ಆನ್ ಮಾಡಿದರು. ತಡರಾತ್ರಿ ಆಗಿದ್ದರಿಂದ ಮುಖ್ಯ ವಾಹಿನಿಗಳು ಸ್ಥಗಿತಗೊಂಡಿದ್ದವು. ಮತ್ತಷ್ಟು ಘಟನಾವಳಿಗಳು ನೆನಪಾಗಿ ಅವರನ್ನು ರಾತ್ರಿಯೆಲ್ಲ ಕಾಡಿದವು.

ಮಾರನೆಯ ದಿನ ಸದಾಶಿವ ಆಫೀಸ್‌ಗೆ ಹೋಗುತ್ತ ದಾರಿ ಮಧ್ಯೆ ಬಸವನಗುಡಿ ಪೊಲೀಸ್ ಠಾಣೆಯ ಒಳಕ್ಕೆ ನಡೆದರು.

'ನಿಮ್ಮ ಮೇಲೆ ಯಾರಿಗೆ ಕೋಪ, ದ್ವೇಷ ಇದೆ ಎಂಬುದನ್ನು ತಿಳಿಸ್ತೀರಾ?' ನಿನ್ನೆ ಬಂದಿದ್ದ ಅದೇ ಇನ್‌ಸ್ಪೆಕ್ಟರ್ ಸದಾಶಿವರಿಗೆ ತಿರುಗಿ ಅದೇ ಪ್ರಶ್ನೆ ಕೇಳಿದರು.

ಸದಾಶಿವ ಗೋಣನ್ನು ಅಡ್ಡಡ್ಡ ಆಡಿಸಿದರು.

'ನನ್ನ ಮೇಲೆ ಯಾರಿಗೂ ದ್ವೇಷ, ಹಗೆ, ಕೋಪ, ತಾಪ ಇಲ್ಲವೆಂದು ನಿನ್ನೆ ನಾನು ನಿಮಗೆ ಹೇಳಿದ್ದು ತಪ್ಪು! ನನ್ನ ಮೇಲೆ ಹಲವಾರು ಮಂದಿಗೆ ದ್ವೇಷ ಇದೆ. ಆದರೆ, ಯಾವುದೇ ವ್ಯಕ್ತಿಗೆ ತಾನು ಎಷ್ಟು ಜನರ, ಎಷ್ಟೋ ವಿಷಯಗಳಲ್ಲಿ ತಪ್ಪಾಗಿ ನಡೆದುಕೊಂಡಿದ್ದೇನೆ, ನೋವು ಕೊಟ್ಟಿದ್ದೇನೆ ಎಂಬುದೇ ನೆನಪಿನಲ್ಲಿ ಉಳಿದಿರುವುದಿಲ್ಲ. ಇನ್ನು ಮುಂದೆ, ನಾನೆಂದೂ ಕಿಟಕಿಗೆ ಬೆನ್ನು ಮಾಡಿ ಕುಳಿತುಕೊಳ್ಳುವುದಿಲ್ಲ. ಈ ಕೇಸನ್ನು ಇಲ್ಲಿಗೇ ಬಿಟ್ಟುಬಿಡಿ ಎಂದು ಮನವಿ ಮಾಡಿಕೊಳ್ಳಲು ಬಂದಿದ್ದೇನೆ. ಇಂದಿನಿಂದ ನನ್ನ ಮೇಲೆ ದ್ವೇಷ, ಬೇಸರ ಇದ್ದವರನ್ನೆಲ್ಲ ಭೇಟಿ ಮಾಡಿ ಅವರ ಕ್ಷಮೆ ಕೋರಿ, ಸಾಧ್ಯವಾದಷ್ಟು ಅವರೆಲ್ಲರ ಪ್ರೀತಿ, ವಿಶ್ವಾಸ ಗಳಿಸಲು ಪ್ರಯತ್ನಿಸುತ್ತೇನೆ. ದ್ವೇಷ, ಸಿಡುಕು, ಕೋಪ, ತಾಪ, ವಂಚನೆಗಳಂತ ಪಾತಕಗಳು ನಮ್ಮ ಸಮಾಜದಲ್ಲಿ ಬೇರೊಂದಿಲ್ಲ! ಅವುಗಳನ್ನೆಲ್ಲಾ ತ್ಯಜಿಸಿ, 'ಎಲ್ಲರನ್ನೂ ಪ್ರೀತಿಸು' ಎಂಬುದೇ ನನ್ನ ಮುಂದಿನ ದಿವ್ಯ ಮಂತ್ರ. ಆಗ ನಾವು ಸಮಾಜದಲ್ಲಿ ಯಾರಿಗೂ ಹೆದರುವ ಪ್ರಮೇಯವೇ ಇರುವುದಿಲ್ಲ. ಆ ಎರಡು ಗುಂಡುಗಳು ನನ್ನ ಎರಡು ಕಣ್ಣುಗಳನ್ನು ತೆರೆಸಿವೆ' ಎಂದು ಹೇಳಿ ನಿರ್ಗಮಿಸುತ್ತಿದ್ದ ಸದಾಶಿವರನ್ನೇ ದಿಟ್ಟಿಸುತ್ತಿದ್ದರು ಇನ್‌ಸ್ಪೆಕ್ಟರ್.

## ಜಿ.ವಿ. ಪ್ರಭು

ಬ್ಯಾಂಕ್ ಉದ್ಯೋಗಿಯಾಗಿ ನಿವೃತ್ತರಾಗಿರುವ ಪ್ರಭು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಹೆಣ್ಣು ಗಂಡಿನ ನಡುವಿನ ಸೃಜನಾತ್ಮಕ ಸಂಬಂಧವನ್ನು ಅವರು ತಮ್ಮ ಕತೆಗಳಲ್ಲಿ ಬರೆಯುತ್ತ ಬಂದಿದ್ದಾರೆ. 35 ವರ್ಷಗಳಿಂದ ಕನ್ನಡ ಪತ್ರಿಕೆಗಳಿಗೆ ಬರೆಯುತ್ತಿರುವ ಅವರ 500 ಕತೆಗಳು ಪ್ರಕಟವಾಗಿವೆ. 'ಧರ್ಮಶಿಥಿಲ', 'ಪಂಚವಟಿ ಪ್ರಮಾದ' ಅವರ ಕಥಾಸಂಗ್ರಹಗಳು. ನಗೆಹನಿಗಳು, ಹಾಸ್ಯ ಪ್ರಸಂಗಳನ್ನು ಬರೆದಿರುವ ಪ್ರಭು ಅವರದು ಓದುಗರಿಗೆ ಪರಿಚಿತ ಹೆಸರು. ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಯಲ್ದೂರು ಅವರ ಊರು.